ಅರ್ಜಿ ಸ್ವೀಕೃತವಾಗಬೇಕು, ಎರಡನೆಯ ತಿರಸ್ಕೃತವಾಗಬೇಕು. ಆದರೆ ಇಲ್ಲಿ ಎರಡನೇಯದ್ದನ್ನು ತಿರಸ್ಕೃತ ಮಾಡುವಂಥಾದ್ದು. ಇದೊಂದು ಹೊಸ ಪದ್ಧತಿ. ನನಗೆ ಅನುಮಾನ ಏನೆಂದರೆ ಅದೇ ಗುಂಪಿನಿಂದ ಪ್ರತಿಬಾರಿಯೂ ಅವ್ಯವಹಾರ ಆ ಬ್ಯಾಂಕಿನಲ್ಲಿ ನಡೆದಿರಬೇಕು. ಆ ಅನುಮಾನ ನನಗೆ ಇರುವುದರಿಂದ ಅಲ್ಲಿ ತನಿಖೆಯಾಗಬೇಕಾಗುತ್ತದೆ. ಒಂದು ಚುನಾವಣಾಧಿಕಾರಿಗಳ ಬಗ್ಗೆ ಕ್ರಮವನ್ನು ಕೈಗೊಳ್ಳಬೇಕು. ಇನ್ನೊಂದು ಆ ಬ್ಯಾಂಕಿನ ವ್ಯವಸ್ಥೆ ಬಗ್ಗೆ ಅನುಮಾನ ಬಂದಿದೆ. ನಾನು ಕೇವಲ ಉಪ್ಪೂರು ಹಾಗೂ ಕೊಟಾಸಿಯಾ ಈ ಎರಡು ಬ್ಯಾಂಕುಗಳನ್ನು ಹೇಳುತ್ತಿಲ್ಲ. ಇಲ್ಲಿ ಕೆಲವು ವರ್ಷದಿಂದ ಇದು ನಡೆದುಕೊಂಡು ಬಂದಿದ್ದು, ಕಳೆದ ಬಾರಿ ಸಹ ಆಗಿದೆ. ಅನೇಕ ಬ್ಯಾಂಕುಗಳಲ್ಲಿ ಕೆಲವು ಕಡೆ ಅವರೇ ಸಿಗ್ನೇಚರ್‌ಗಳನ್ನು ವಿತ್‌ಡ್ರಾ ಮಾಡಿದ್ದಾರೆ. ನಾಮಪತ್ರಕ್ಕೆ ಅವರೇ ಸಹಿ ಹಾಕಿ ವಿತ್‌ಡ್ರಾ ಮಾಡಿರುವಂತಹ ಈ ಘಟನೆ ನಡೆದಿದೆ. ಆದುದರಿಂದ ಸರ್ಕಾರ ಇದರ ಬಗ್ಗೆ ಏನು ಕ್ರಮ ತಎಗೆದುಕೊಳ್ಳುತ್ತದೆ ಎಂದು ತಮ್ಮ ಮೂಲಕ ಕೇಳುವುದಕ್ಕೆ ನಾನು ಇಚ್ಛೆ ಪಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಬಹಳ ಗುರುತರವಾದಂತಹ ಆಪಾದನೆಗಳಿವೆ. ಇಂತಹ ಪ್ರಕರಣಗಳು ಅಲ್ಲಲ್ಲಿ ಕೂಡ ವರದಿಯಾಗಿರುವುದು ಪತ್ರಿಕೆಯಲ್ಲಿ ನಾವು ನೋಡಿದ್ದೇವೆ. ಯಾವುದೇ ಚುನಾವಣೆಯಾದರೂ, ಅದು ನ್ಯಾಯಸಮ್ಮತವಾಗಿ, ಕಾನೂನು ಬದ್ಧವಾಗಿ ನಡೆಯಬೇಕಾಗಿದೆ. ಅದರಲ್ಲೂ ಸಹಕಾರ ಸಂಘಗಳ ಚುನಾವಣೆಗಳಂತೂ ಕಾನೂನಿಗೆ ಅನುಗುಣವಾಗಿಯೇ ನಡೆಯಬೇಕು. ಆದರೆ ಇದು ರಾಜಕೀಯ ಹಸ್ತಕ್ಷೇಪದಿಂದ ಈ ರೀತಿ ಆಗಿದೆ ಎನ್ನುವುದನ್ನು ತಾವು ಎರಡು ಬ್ಯಾಂಕುಗಳ ಉದಾಹರಣೆಯನ್ನು ಕೂಡ ತಮ್ಮ ಪ್ರಸ್ತಾಪದಲ್ಲಿ ಕಾಣಿಸಿದ್ದೀರಿ. ಈ ದಿವಸವೇ ಅಲ್ಲಿನ ಡಿಸ್ಟ್ರೀಕ್ಟ್ ರಿಜಿಸ್ಟ್ರಾರ್ ಜೊತೆ ಮಾತನಾಡಿ, ಇಲಾಖಾ ವತಿಯಿಂದ ವರದಿಯನ್ನು ತರಿಸಿಕೊಳ್ಳುವುದರ ಜೊತೆಗೆ, ಮಾನ್ಯ ಸಹಕಾರ ಸಚಿವರ ಗಮನಕ್ಕೂ ಕೂಡ ಇದನ್ನು ತಂದು ತಮಗೆ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಎಂ.ಪಿ. ಕುಮಾರಸ್ವಾಮಿ (ಮೂಡಿಗೆರೆ): ಮಾನ್ಯ ಉಪಾಧ್ಯಕ್ಷರೆ, ಮೂಡಿಗೆರೆ ತಾಲ್ಲೂಕಿನ ಕಳಸದಲ್ಲಿ ಕೂಡ ಈ ತರಹ ಆಗಿದೆ. ಕೇವಲ ಡೇಟ್ ಮಾತ್ರ ಹಾಕಿಲ್ಲ. ಅದಕ್ಕೇ ರಿಜೆಕ್ಟ್ ಆಗಿದೆ. ದಯಮಾಡಿ ಇದನ್ನು ಕೂಡ ತನಿಖೆ ಮಾಡಿಸಿಕೊಡಬೇಕು.

(ಖಖ) ವಿಷಯ: ಕುದುರೆಮುಖ ಸುರಕ್ಷಿತ ಆರಣ್ಯ ಪ್ರದೇಶದ ಜನರಿಗೆ ಅಭಿವೃದ್ಧಿ ಮತ್ತು ಪುನರ್ವಸತಿಗೆ ಪ್ಯಾಕೇಜ್ ಘೋಷಿಸುವ ಬಗ್ಗೆ

ಶ್ರೀ ಎಂ.ಪಿ. ಕುಮಾರಸ್ವಾಮಿ (ಮೂಡಿಗೆರೆ): ಮಾನ್ಯ ಉಪಾಧ್ಯಕ್ಷರೆ, ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ಈಗಾಗಲೆ ಪ್ಯಾಕೇಜ್ ಘೋಷಣೆಯಾಗಿದೆ. ಆ ಪ್ಯಾಕೇಜ್ ಯಾವ ಸಂದರ್ಭದಲ್ಲಿ ಪ್ರಸ್ತಾಪ ಆಗುತ್ತದೆ ಎಂದರೆ ಪ್ರತಿ ಅಧಿವೇಶನ ನಡೆಯಬೇಕಾದರೆ ಅಭಿವೃದ್ಧಿ ಆಯುಕ್ತರು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿಗೆ ಹೋಗಿದ್ದರೆಂದು ಮಾಹಿತಿ ಬರುತ್ತದೆ. ಚಳಿಗಾಲದ ಅಧಿವೇಶನ

ಪ್ರಾರಂಭವಾದಾಗ ಅಭಿವೃದ್ಧಿ ಆಯುಕ್ತರು, ರಾಷ್ಟ್ರೀಯ ಉದ್ಯಾನವನವಾದ ಕುದುರೆಮುಖಕ್ಕೆ ಹೋಗಿದ್ದಾರೆ ಎಂದು ಸುದ್ದಿಯಾಗಿತ್ತು. ಮತ್ತೆ ಈ ಬಾರಿ ಅಧಿವೇಶನ ಪ್ರಾರಂಭವಾಯಿತು, ಮತ್ತೆ ಅಭಿವೃದ್ಧಿ ಆಯುಕ್ತರು ಕುದುರೆಮುಖಕ್ಕೆ ಹೋಗಿದ್ದಾರೆ ಎಂದು ಪತ್ರಿಕೆಯಲ್ಲಿ ಸುದ್ದಿಯಾಯಿತು. ಆದರೆ ಆ ಪ್ಯಾಕೇಜ್ ಏನಾಯಿತು ಎಂದು ಅಲ್ಲಿಯ ಜನಪ್ರತಿನಿಧಿಗಳಾದ ನಮಗೆ ಏನೂ ಕೂಡ ಗೊತ್ತಿಲ್ಲ ಅಲ್ಲಿ ಪರಿಹಾರದ ಬಗ್ಗೆ ಪೂರ್ತಿ ನಮ್ಮನ್ನು ಕತ್ತಲಲ್ಲಿ ಇಡಲಾಗಿದೆ. ಅಲ್ಲಿನ ಜನಸಾಮಾನ್ಯರಿಗೂ ಮತ್ತು ನಮಗೂ ಇರುವಂತಹ ಸಂಬಂಧವನ್ನೇ ಕಳಚುವ ರೀತಿಯಲ್ಲಿ ಇವರು ಅಲ್ಲಿ ಹೋಗಿ ಜನರನ್ನು ಕಂಡು ವಾಪಸ್ಸು ಬರುತ್ತಾರೆ. ಕೇವಲ ಅಲ್ಲಿಗೆ ಅಧಿವೇಶನದ ಸಮಯದಲ್ಲಿ ಮಾತ್ರ ಹೋಗುವುದು ಹಾಗೂ ಅಲ್ಲಿನ ಪ್ಯಾಕೇಜ್ ಮೂಲಕ ಮಾಡಬೇಕಾದಂತಹ ಅಭಿವೃದ್ಧಿ ಕಾರ್ಯಗಳನ್ನು ಕುಂಠಿತಗೊಂಡಿವೆ. ಆದುದರಿಂದ ನಮಗೆ ಏಕೆ ಈ ರೀತಿ ಮೋಸ ಮಾಡುತ್ತಿದ್ದೀರಿ? ಅದೇನು ಪ್ಯಾಕೇಜ್ ಮಾಡಿದ್ದೀರಿ, ಅದನ್ನು ನಮಗೆ ಹೇಳಿ. ನಾವು ಹೇಳುವಂತಹ ಒಂದು ವಿಚಾರವನ್ನೂ ಕೂಡ ಕೇಳುತ್ತಿಲ್ಲ. ಅಲ್ಲಿ ಕಳಸದಲ್ಲಿ ಒಂದು ಪದವಿ ಕಾಲೇಜು ಬೇಕೆಂದು ಕೇಳಿದ್ದೇವೆ, ಒಂದು ಆಸ್ಪತ್ರೆ ಬೇಕೆಂದು ಕೇಳಿದ್ದೇವೆ. ಅದರ ಬಗ್ಗೆ ಯಾರೂ ಕೂಡ ನಮ್ಮನ್ನು ಕೇಳುತ್ತಿಲ್ಲ. ನಮ್ಮನ್ನು ಕತ್ತಲೆಯಲ್ಲಿಟ್ಟು ನೀವು ಈ ರೀತಿ ಮಾಡಬಾರದು. ದಯವಿಟ್ಟು ಅದರ ಬಗ್ಗೆ ನಮಗೂ ಕೂಡ ತಿಳಿಸಬೇಕು ಎನ್ನುವ ಮಾತನ್ನು ನಾನು ಮಾನ್ಯ ಉಪಾಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಈ ವಿಷಯವಾಗಿ ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಕುದುರೆಮುಖ ಸುರಕ್ಷಿತ ಅರಣ್ಯ ಪ್ರದೇಶದ ಜನರ ಅಭಿವೃದ್ಧಿಗಾಗಿ, ಹೇಳಿದ್ದಾರೆ. ಏನು ಹಿಂದಿನ ಸರ್ಕಾರದವರು ಹಾಗೂ ನಾವು ಇತ್ತೀಚೆಗೆ ನಾವೆಲ್ಲ ಹೇಳಿಕೆಯನ್ನು ಕೊಟ್ಟಂತೆ, ಅಲ್ಲಿಯ ಅಭಿವೃದ್ಧಿಗೆ ಮತ್ತು ಪುನರ್ ವಸತಿಗೆ ಸಂಬಂಧಪಟ್ಟಂತೆ, ನಾವು ಪ್ಯಾಕೇಜ್ ಎಂದು ಕೊಟ್ಟಿರುವಂತಹ ವಿಚಾರದಲ್ಲಿ ಹಿಂದಕ್ಕೆ ಬರುವಂತಹ ಪ್ರಶ್ನೆ ಉದ್ಭವವಾಗುವುದಿಲ್ಲ. ಸರ್ಕಾರ ಅದಕ್ಕೆ ಬದ್ಧತೆಯಿಂದ ಇದೆಯೆಂಬ ಸ್ಪಷ್ಟೀಕರಣವನ್ನು ಅವರು ಕೊಟ್ಟಿದ್ದಾರೆ. ಆಗಿರುವಂತಹ ಕೆಲಸ ಕಾರ್ಯಗಳಲ್ಲಿ ಸ್ವಲ್ಪ ವಿಳಂಬವಾಗಿರಬಹುದು, ಅದಕ್ಕೆ ಅನ್ಯ ಕಾರಣಗಳು ಸಹ ಸೇರಿವೆ. ಈಗ ಉದಾಹರಣೆಗಾಗಿ ಹೇಳುವುದಾದರೆ ಪುನರ್ ವಸತಿ ವಿಚಾರದಲ್ಲಿ ಅಲ್ಲಿರುವಂತಹ ಸರ್ಕಾರೇತರ ಸಂಘ ಸಂಸ್ಥೆಗಳಲ್ಲಿ, ಬಹಳ ದೊಡ್ಡ ಭಿನ್ನಾಭಿಪ್ರಾಯ ಇರುವಂಥಾದ್ದು ಇದೆ. ಪುನರ್‌ವಸತಿಯನ್ನು ಮಾಡಬೇಕಾಗಿದ್ದರೆ ಆ ಅರಣ್ಯ ಪ್ರದೇಶದ ಆಚೆಗೆ ಇರತಕ್ಕಂಥ ಪ್ರದೇಶದಲ್ಲಿ ವಾಸಿಸುವತ್ತೇವೆಂದು ಹೇಳಿ ಬಹಳಷ್ಟು ಜನರು ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಇನ್ನು ಕೆಲವು ನಾವು ಯಾವುದೇ ಕಾರಣದಿಂದಲೂ, ಆ ಕಾಡನ್ನು ಬಿಟ್ಟು ಹೊರಗಡೆ ಬರುವುದಿಲ್ಲವೆಂಬ ಮಾತನ್ನು ಹೇಳಿದ್ದಾರೆ. ಕೆಲವು ಮಾತ್ರ ಹೊರಗಿದ್ದು, ಕೆಲವು ಕಾಡಿನ ಒಳಗಿದ್ದು, ಅದರ ಮೂಲಕ ನಾವು ಅಭಿವೃದ್ಧಿಯನ್ನು ಸಾಧಿಸುತ್ತೇವೆನ್ನುವಂಥಾದ್ದು ಮತ್ತು ರಾಷ್ಟ್ರೀಯ ಉದ್ಯಾನವನ್ನು ಮಾಡುವಂಥಾದ್ದು ಕಷ್ಟದ ಕೆಲಸವೆಂದು ತಮಗೂ ಗೊತ್ತಿದೆ. ಆದರೂ ಕೂಡ ಸನ್ಮಾನ್ಯ ಮುಖ್ಯಮಂತ್ರಿಯವರು, ಯಾರು ಕಾಡಿನಿಂದ ಹೊರಗಡೆ

ಬರುತ್ತೇವೆಂದು, ಹೇಳಿ ಕಾಡಿನ ಅಂಚಿನಲ್ಲಿದ್ದು ತಮ್ಮ ಅಭಿವೃದ್ಧಿಯನ್ನು ಪುನರ್‌ವಸತಿಯನ್ನು ಮಾಡುತ್ತಾರೆ, ಅವರಿಗೆ ನಾವು ಅನುಕೂಲವನ್ನು ಮಾಡಿಕೊಡತ್ತೇವೆ. ಕಾಡಿನ ಒಳಗಡೆ ಇರುವರಿಗೂ ಕೂಡ ನಾವು ಅನುಕೂಲವನ್ನು ಮಾಡಿ, ಅವರಿಗೆ ಪಟ್ಟಾ ಕೊಡುವಂತಹ ಕೆಲಸ, ಸಾಗುವ ಚೀಟಿ ಕೊಡುವಂಥಾದ್ದು ಮಾಡುತ್ತೇವೆನ್ನುವಂಥಾದ್ದು ಆಗಿದೆ. ಇನ್ನು ಅಕ್ರಮ ಸಕ್ರಮ ಸಮಿತಿಯ ರಚನೆಯಾಗಬೇಕಾಗಿರುವಂಥಾದ್ದರಲ್ಲಿ ಅಲ್ಲಿ ಎ.ಸಿ. ಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿ, ತತ್ ತಕ್ಷಣದಲ್ಲಿ ಅದು ವರದಿಯನ್ನು ಕೊಡಬೇಕೆಂಬ ವಿಚಾರಣವನ್ನು ಪ್ರಸ್ತಾಪಿಸಲಾಯಿತು. ಆದರೆ ತಮಗೆ ಗೊತ್ತಿರುವಂತೆ, ಬಗರ್ ಹುಕುಂಗೆ ಸಂಬಂಧಪಟ್ಟಂತೆ ಸಾಗುವಳಿ ಚೀಟಿಯನ್ನು ಕೊಡುವಂತಹದ್ದು ಶಾಸಕರುಗಳ ಅಧ್ಯಕ್ಷತೆಯಲ್ಲೇ ನಡೆಯಬೇಕೆಂಬ ಕಾರಣವಿರುವುದರಿಂದ, ನಾವು ಇದನ್ನು ಏಪ್ರಿಲ್ ತಿಂಗಳಲ್ಲಿ ಮಾಡುತ್ತೇವೆ. ಇದನ್ನು ಕಾನೂನು ಮಾಡಿದಾಗ, ಅದು ಕೇವಲ ಚಿಕ್ಕಮಗಳೂರು ಜಿಲ್ಲೆಗೆ ಮಾತ್ರ ಸೀಮಿತವೆಂದು ಹೇಳುವುದಕ್ಕೆ ಆಗುವುದಿಲ್ಲ. ಈ ವಿಚಾರದಲ್ಲಿ ಎಲ್ಲಾ ಶಾಸಕರುಗಳು ತಮ್ಮ ಆಕ್ಷೇಪಣೆಗಳನ್ನು ಎತ್ತಬಹುದು. ಆ ಕಾರಣಕ್ಕಾಗಿ, ಶಾಸಕರುಗಳ ಅಧ್ಯಕ್ಷತೆಯಲ್ಲಿ ಈ ಸಾಗುವಳಿ ಚೀಟಿಯನ್ನು ಕೊಡುವಂತಹ ವಿಚಾರವೇನು ಇದೆ, ಅದು ಚಿಕ್ಕಮಗಳೂರು ಜಿಲ್ಲೆಯಾಗಿರಬಹುದು, ಅಥವಾ ಬೇರೆ ಕಡೆ ಆಗಿರಬಹುದು. ಅದನ್ನು ನಾವು ಏಪ್ರಿಲ್ ತಿಂಗಳಲ್ಲಿ, ಪ್ರಾರಂಭ ಮಾಡುತ್ತೇನ್ನುವಂತಹ ಮಾತನ್ನು ಅನೌಪಚಾರಿಕ ಮತ್ತು ಔಪಚಾರಿಕ ಸಭೆಗಳಲ್ಲಿ ಪ್ರಸ್ತಾಪ ಮಾಡಿದ್ದೇವೆ. ಮಾನ್ಯ ಚಿರಂಜೀವಿ ಸಿಂಗ್‌ರವರು ಕೂಡ ಅಲ್ಲಿಗೆ ಹೋಗಿ ನಕ್ಸಲಿಯರ ಸಮಸ್ಯೆಯ ಸಂಬಂಧಪಟ್ಟ ವಿಚಾರದಲ್ಲಿಯೂ ಕೂಡ ತಮ್ಮ ವರದಿಯನ್ನು ಕೊಟ್ಟಿದ್ದಾರೆ. ಆ ಹಿನ್ನಲೆಯಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ನಾವು ತತ್‌ಕ್ಷಣದಲ್ಲಿ ಕೈಗೊಳ್ಳುತ್ತೇನ್ನುವಂತಹ ಮಾತನ್ನು ಹೇಳುತ್ತೇನೆ.

ಶ್ರೀ ಎಂ.ಪಿ. ಕುಮಾರಸ್ವಾಮಿ: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಂತ್ರಿಯವರು ಕೊಟ್ಟಂತಹ ಉತ್ತರದಿಂದ ನನಗೆ ಸಮಾಧಾನವಾಗಲಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ತಾವು ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೀರಿ. ನಾವು ಉತ್ತರವನ್ನು ಹೇಳಿದ್ದೇವೆ.

+ (ಎ) ವಿಷಯ: ಬೇರೆ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿಯೂ ಸ್ಟ್ಯಾಂಪ್ ಪೇಪರ್‌ನ ವಿತರಣೆ ವ್ಯವಸ್ಥೆ ಬಗ್ಗೆ

ಶ್ರೀ ಕೆ. ಪ್ರಭಾಕರ್ ಬಂಗಾರ (ಬೆಳ್ತಂಗಡಿ): ಮಾನ್ಯ ಉಪಾಧ್ಯಕ್ಷರೇ, ಹಿಂದಿನ ಸರ್ಕಾರವಿದ್ದಾಗ ನಕಲಿ ಛಾಪಾ ಕಾಗದದ ಹಗರಣದ ಹಿನ್ನಲೆಯಲ್ಲಿ ಸ್ಟಾಂಪ್ ಪೇಪರ್ ಅನ್ನು ಸ್ಟಾಂಪ್ ವೆಂಡರ್‌ಗಳ ಮೂಲಕ ಮಾರಾಟ ಮಾಡುವಂಥಾದ್ದನ್ನು ರದ್ದು ಮಾಡಿತ್ತು. ತದನಂತರ ಸರ್ಕಾರ ರಾಷ್ಟ್ರೀಕೃತ ಬ್ಯಾಂಕ್‌ಗಳ ಮೂಲಕ ಉದಾಹರಣೆಗೆ ನಮ್ಮ ಕ್ಷೇತ್ರದಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್‌ನ ಮೂಲಕ ಆ ವ್ಯವಹಾರ ನಡೆಯುವಂತೆ ಮಾಡಿತ್ತು. ಇದರಿಂದ ನಮ್ಮ ಬೆಳ್ತಗಂಡಿ ತಾಲ್ಲೂಕಿನ ಜನಸಾಮಾನ್ಯರಿಗೆ ತುಂಬಾ ತೊಂದರೆಯಾಗುತ್ತಿದೆ. ಇಲ್ಲಿ ಮೂಲೆ ಮೂಲೆಯಿಂದ

+ಮಾನ್ಯ ಸದಸ್ಯರಿಂದ ಪರಿಶೀಲಿಸಲ್ಪಟ್ಟಿದೆ.